**ಅಸಲು ದಾವಾ ನಂಃ05/2024**
**ಪಿ.ಡಬ್ಲ್ಯೂಃ 01**

**ದಿನಾಂಕಃ 29-10-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಕೆ ಎಂ ಎನ್., ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಈ ಕೆಳಕಂಡ

ದಿಃ13-07-2015 ರ ನೋಂದಾಯಿತ ಕ್ರಯದ ಕರಾರು ಪತ್ರದ ಗಣಕೀಕೃತ ಪ್ರತಿಯನ್ನು ನಿಪಿಃ1 ಎಂದು, ದಿಃ11-04-2017 ರ ಜಿಲ್ಲಾಧಿಕಾರಿಗಳ ಕಾರ್ಯಾಲಯ ಚಿತ್ರದುರ್ಗ ಇವರು ನೀಡಿರುವ ಅಧೀಕೃತ ಜ್ಞಾಪನ ಪತ್ರದ ದೃಡೀಕೃತ ಪ್ರತಿಯನ್ನು ನಿಪಿಃ2 ಎಂದು, ದಿಃ12-12-2023 ರ ವಕೀಲರು ನೀಡಿರುವ ನೋಟೀಸ್ ನ್ನು ನಿಪಿಃ3 ಎಂದು, ಆರ್.ಪಿ.ಎ.ಡಿ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಗಿ ಸದರಿ ಲಕೋಟೆಯಲ್ಲಿ ಅಸಲು ಲೀಗಲ್ ನೋಟೀಸ್ ಇರುತ್ತದೆ ಜಾರಿಯಾಗದೆ ಹಿಂದುರುಗಿದ ಅಂಚೆ ಲಕೋಟೆಯನ್ನು ನಿಪಿ-4, ಅದರಲ್ಲಿರುವ ನೋಟೀಸ್ ಪ್ರತಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಬೊಮ್ಮಸಮುದ್ರ ಗ್ರಾಮದ ಸರ್ವೇನಂ.158 ರ ಗಣಕೀಕೃತ ಪಹಣಿಯನ್ನು ನಿಪಿಃ5 ಎಂದು, ದಿಃ01-03-2024 ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯ ಚಿತ್ರದುರ್ಗ ಇವರು ನೀಡಿರುವ ಅಧೀಕೃತ ಜ್ಞಾಪನದ ಮೂಲ ಪ್ರತಿಯನ್ನು ನಿಪಿಃ6 ಎಂದು, ಮರಣ ಪ್ರಮಾಣಪತ್ರವನ್ನು ನಿಪಿಃ7, ಅಂಚೆ ರಶೀದಿಯನ್ನು ನಿಪಿಃ8 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿಃ9 ಎಂದು ಗುರುತಿಸಲಾಯಿತು.

ಆದ್ದರಿಂದ ಸದರಿ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**(ಪ್ರತಿವಾದಿಯವರು ಮತ್ತು ಅವರ ಪರ ವಕೀಲರನ್ನು ಕೂಗಿ, ಕರೆಯಲಾಗಿ ಗೈರು ಹಾಜರಿದ್ದು, ಅವರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.